ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ – 571 401
MANDYA INSTITUTE OF MEDICAL SCIENCES
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198
E.Mail Address:
mimsmandya@gmail.com

ದಿನಾಂಕ: 01.02.2012 ರಂದು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೌನ್ಸಿಲ್ ಸಭಾಂಗಣದಲ್ಲಿ 'ಮಿಮ್ಸ್ ವರ್ಕ್ಸ್ ಕಮಿಟಿಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ವಿವಿಧ ಕಟ್ಟಡ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ,
2. ನಿರ್ದೇಶಕರು, ಮಿಮ್ಸ್ ಮಂಡ್ಯ.
3. ಮುಖ್ಯಆಡಳಿತಾಧಿಕಾರಿಗಳು, ಮಿಮ್ಸ್ ಮಂಡ್ಯ.
4. ಆರ್ಥಿಕ ಸಲಹೆಗಾರರು, ಮಿಮ್ಸ್ ಮಂಡ್ಯ.
5. ವೈದ್ಯಕೀಯ ಅಧೀಕ್ಷಕರು, ಮಿಮ್ಸ್ ಬೋಧಕ ಆಸ್ಪತ್ರೆ, ಮಿಮ್ಸ್, ಮಂಡ್ಯ.
6. ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪವಿಭಾಗ-1, ಮಂಡ್ಯ.
7. ಕಿರಿಯ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಮಂಡ್ಯ.

ಸಂಸ್ಥೆಯ ನಿರ್ದೇಶಕರವರು, ವರ್ಕ್ಸ್ ಕಮಿಟಿಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಂಸ್ಥೆಯ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ಹಿಂದಿನ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ವಿವರಿಸಲಾಯಿತು.

1) **ಹೊಸದಾಗಿ ಕೈಗೆತ್ತಿಕೊಳ್ಳಬೇಕಿರುವ ಕಾಮಗಾರಿಗಳಿಗೆ ಅನುಮೋದನೆ ಪಡೆದುಕೊಳ್ಳುವ ಕುರಿತು.**

1. **ಕಾಲೇಜು ಕಟ್ಟಡದ ಎಡಬಾಗದ (Left side) ಹೊರಾಂಗಣ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಬಗ್ಗೆ (Land scape)**

   ಸದರೀ ಕಾಮಗಾರಿ ಕೈಗೊಳ್ಳುವ ಬಗ್ಗೆ ಚರ್ಚಿಸಲಾಯಿತು. ಅಂದಾಜುಪಟ್ಟಿ ಸಿದ್ಧಪಡಿಸಿ ಸಲ್ಲಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯ ರವರಿಗೆ ಸೂಚಿಸಲಾಯಿತು.

2. **ಆಸ್ಪತ್ರೆ ರಸ್ತೆಯಿಂದ ಕ್ಯಾಂಟೀನ್ ಕಟ್ಟಡಕ್ಕೆ ಹೋಗುವ ರಸ್ತೆ ನವೀಕರಣ ಕಾಮಗಾರಿ ಕೈಗೊಳ್ಳುವ ಬಗ್ಗೆ.**

   ಈಗಾಗಲೇ ನೀಡಿರುವ ಅಂದಾಜು ಪಟ್ಟಿಯನ್ನು ಬದಲಾಯಿಸಿ ಹೊಸದಾಗಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಸಹಾಯಕ ಕಾರ್ಯಪಾಲಕ ಅಭಿಯಂತರರು ರವರಿಗೆ ಸೂಚಿಸಿದರು.

3. **ಎಂ.ಸಿ.ಐ ನವದೆಹಲಿ ತಂಡದವರು ಪರಿವೀಕ್ಷಣೆಗೆ ಬರುವುದರಿಂದ ಹಳೆಯ ಜಿಲ್ಲಾ ಆಸ್ಪತ್ರೆಯ (ಕಲ್ಲುಕಟ್ಟಡ) ಕಟ್ಟಡಕ್ಕೆ ರಿಪೇರಿ ಮತ್ತು ಸುಣ್ಣ ಬಣ್ಣ ಲೇಪಿಸುವ ಕಾಮಗಾರಿ ಕೈಗೊಳ್ಳುವ ಬಗ್ಗೆ.**

ಬಣ್ಣ ಬಳೆಯುವ ಕಾಮಗಾರಿ ಜೊತೆಗೆ ಬಾಗಿಲುಗಳನ್ನು ಸರಿಪಡಿಸಲು ಮತ್ತು ಚುರುಕಿ ಕಾಮಗಾರಿಯನ್ನು ಸಹ ಮಾಡಿಸಲು ವೈದ್ಯಕೀಯ ಅಧೀಕ್ಷಕರು ರವರು ಕೋರಿದರು, ಅದರಂತೆ ಅಂದಾಜು ಪಟ್ಟಿಯನ್ನು ತಯಾರಿಸಿ ನೀಡಲು ಸಹಾಯಕ ಕಾರ್ಯಾಪಾಲಕ ಅಭಿಯಂತರರು ರವರಿಗೆ ಅಧ್ಯಕ್ಷರು ಸೂಚಿಸಿದರು.

4. **ಆಸ್ಪತ್ರೆಯ ಆವರಣದಿಂದ ಮೆಕನೈಸಡ್ ಲಾಂಡ್ರಿ ಕಟ್ಟಡಕ್ಕೆ ಹೋಗಲು ಹೊಸದಾಗಿ ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳುವ ಬಗ್ಗೆ.**

ಈಗಾಗಲೆ ನೀಡಿರುವ ಅಂದಾಜು ಪಟ್ಟಿಯನ್ನು ಬದಲಾಯಿಸಲು ಹೊಸದಾಗಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ರವರು, ಸಹಾಯಕ ಕಾರ್ಯಾಪಾಲಕ ಅಭಿಯಂತರರು ರವರಿಗೆ ಸೂಚಿಸಿದರು.

5. **ನಿರ್ದೇಶಕರ ಕೊಠಡಿಯ ನವೀಕರಣ ಮತ್ತು ಕಛೇರಿಯ ಆಧುನೀಕರಣ ಕಾಮಗಾರಿ ಕೈಗೊಳ್ಳಲು ಅಂದಾಜುಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆಯುವ ಬಗ್ಗೆ.**

ಅಂದಾಜು ಪಟ್ಟಿಯನ್ನು ಸಲ್ಲಿಸಲು ಅಧ್ಯಕ್ಷರು ಸಹಾಯಕ ಕಾರ್ಯಾಪಾಲಕ ಅಭಿಯಂತರರು ರವರಿಗೆ ಸೂಚಿಸಿದರು.

6. **ಸಂಸ್ಥೆಯ ಆವರಣದಲ್ಲಿ Central Diagnostic Laboratory ಕಟ್ಟಡ ನಿರ್ಮಾಣ ಮಾಡುವ ಬಗ್ಗೆ.**

ಅಂದಾಜು ಪಟ್ಟಿಯನ್ನು ತಯಾರಿಸಿ ನೀಡಲು ಅಧ್ಯಕ್ಷರು ಸಹಾಯಕ ಕಾರ್ಯಾಪಾಲಕ ಅಭಿಯಂತರರು ರವರಿಗೆ ಸೂಚಿಸಿದರು.

7. **ಹೊಸದಾಗಿ ನಿರ್ಮಿಸಿರುವ ಕ್ಯಾಂಟೀನ್ ಕಟ್ಟಡದ ಆವರಣವನ್ನು ಅಬಿವೃದ್ಧಿ ಪಡಿಸುವ (Land scape) ಮತ್ತು ಕಟ್ಟಡದ ಹೊರಭಾಗದಲ್ಲಿ ಛಾವಣಿ ಕಾಮಗಾರಿ ಕೆಲಸ ಕೈಗೊಳ್ಳುವ ಬಗ್ಗೆ.**

ಅಂದಾಜು ಪಟ್ಟಿಯನ್ನು ತಯಾರಿಸಿ ನೀಡಲು ಅಧ್ಯಕ್ಷರು ಸಹಾಯಕ ಕಾರ್ಯಾಪಾಲಕ ಅಭಿಯಂತರರು ರವರಿಗೆ ಸೂಚಿಸಿದರು.

8. **ಸಂಸ್ಥೆಯ ಆವರಣದಲ್ಲಿ "ಫುಡ್ ಕೋರ್ಟ್" ನಡೆಸಲು ಕ್ಯಾಂಟಿನ್ ಕಟ್ಟಡವನ್ನು ಟೆಂಡರ್ ಕರೆದು ಹೋಟೆಲ್ ಉದ್ದಿಮೆದಾರರಿಗೆ ವಹಿಸುವ ಬಗ್ಗೆ.**

ಟೆಂಡರ್ ಕರೆದು ಮುಂದಿನ ಕ್ರಮ ವಹಿಸಲು ಒಪ್ಪಿಗೆ ನೀಡಲಾಯಿತು.

9. **ಸಂಸ್ಥೆಯ ಆವರಣದಲ್ಲಿ ಹಾಲೀ ಇರುವ ತಾತ್ಕಾಲಿಕ ಕ್ಷೀರ ಮತ್ತು ಕ್ಯಾಂಟೀನ್ ಮಳಿಗೆಗಳನ್ನು ತೆರವುಗೊಳಿಸುವ ಬಗ್ಗೆ.**

**PP Act** ಪ್ರಕಾರ ಕ್ರಮವಹಿಸಲು ಸೂಚಿಸಲಾಯಿತು. ಈ ಬಗ್ಗೆ ಸೂಕ್ತಕ್ರಮ ವಹಿಸಲು ವೈದ್ಯಕೀಯ ಅಧೀಕ್ಷಕರು ರವರಿಗೆ ಸೂಚಿಸಲಾಯಿತು.

10. **ಭೋಧನಾ ಆಸ್ಪತ್ರೆ ಆವರಣದಲ್ಲಿ ಜನರಿಕ್ ಡ್ರಗ್ ಮಳಿಗೆಯನ್ನು ನಿರ್ಮಿಸುವುದು.**

ಸರ್ಕಾರದ ತೀರ್ಮಾನದಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು.

2) **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.**

ಅ) ಮಿಮ್ಸ್ ಕಾಲೇಜು ಕಟ್ಟಡದ ಹಿಂಭಾಗದಲ್ಲಿ ಕಾಡುಗಿಡಗಳು ಬೆಳದಿದ್ದು ಅವುಗಳನ್ನು ಜೆ.ಸಿ.ಬಿ ಯಂತ್ರದ ಮೂಲಕ ಶುಚಿಗೊಳಿಸಲು ತೀರ್ಮಾನಿಸಲಾಯಿತು.

ಆ) ತುರ್ತು ಅಪಘಾತ ಚಿಕಿತ್ಸಾ ವಿಭಾಗದ ಮುಂದೆ ಹೈಮಾಸ್ಕ್ ದೀಪ ಅಳವಡಿಸಬೇಕೆಂದು ವೈದ್ಯಕೀಯ ಅಧೀಕ್ಷಕರು ಕೋರಿದರು, ಸಭೆಯ ಒಪ್ಪಿಗೆ ಮೇರೆಗೆ ದೀಪ ಅಳವಡಿಸಲು ಒಪ್ಪಿಗೆ ನೀಡಲಾಯಿತು.

ಇ) ಹಾಸ್ಟೆಲ್‌ನ ಕೊಠಡಿಗಳಿಗೆ ವಾರ್ಡ್‌ರೋಬ್ ನಿರ್ಮಿಸಬೇಕೆಂದು ನಿರ್ದೇಶಕರು ಕೋರಲಾಗಿ, ವಾರ್ಡ್‌ರೋಬ್ ನಿರ್ಮಿಸಲು ಕ್ರಮವಹಿಸಲು ಹಾಗೂ ವೆಚ್ಚವನ್ನು SC/ST ಸ್ಕೀಂನಡಿ ಒದಗಿಸಿರುವ ಅನುದಾನದಲ್ಲಿ ಭರಿಸಲು ಒಪ್ಪಿಗೆ ನೀಡಲಾಯಿತು.

ಈ) ಪ್ಯಾರಾಮೆಡಿಕಲ್ ವಿಭಾಗದಲ್ಲಿ ಪಾರ್ಟಿಷನ್‌ವಾಲ್ ನಿರ್ಮಿಸಲು ಅವಶ್ಯಕತೆ ಇರುವುದಾಗಿ, ನಿರ್ದೇಶಕರು ತಿಳಿಯಪಡಿಸಲಾಗಿ, ಪ್ಯಾರಾಮೆಡಿಕಲ್ ವಿಭಾಗದಲ್ಲಿ ಲಭ್ಯವಿರುವ ನಿಧಿಯಲ್ಲಿ ಭರಿಸಿ ಕಾಮಗಾರಿ ಕೈಗೊಳ್ಳ ಒಪ್ಪಿಗೆ ನೀಡಲಾಯಿತು.

ಉ) ಮಿಮ್ಸ್ ಕಟ್ಟಡ ಮತ್ತು ಆಸ್ಪತ್ರೆ ಕಟ್ಟಡ ಸೇರಿದಂತೆ EPBX ಅಳವಡಿಸುವ ಸಂಬಂಧವಾಗಿ ಕ್ರಮವಹಿಸಲು ಒಪ್ಪಿಗೆ ನೀಡಲಾಯಿತು.

ಋ) ಮಿಮ್ಸ್ ಆವರಣದಲ್ಲಿರುವ ಡಾಕ್ಟರ್‌ಗಳ ವಸತಿಗೃಹದ ಸುತ್ತಲೂ ಆವರಣ ಗೋಡೆ ನಿರ್ಮಿಸಲು ಒಪ್ಪಿಗೆ ನೀಡಲಾಯಿತು ಹಾಗೂ ಅಂದಾಜು ಪಟ್ಟಿಯನ್ನು ತಯಾರಿಸಿ ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿಲಾಯಿತು.

ಎ) ಸಂಸ್ಥೆಯ ಹೆಸರಿನ ನಿಯಾನ್ ಬೋರ್ಡ್ ಅಳವಡಿಸಲು ಒಪ್ಪಿಗೆ ನೀಡಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

ಜಿಲ್ಲಾಧಿಕಾರಿಗಳು
ಹಾಗೂ ಅಧ್ಯಕ್ಷರು ವರ್ಕ್ಸ್ ಕಮಿಟಿ
ಮಿಮ್ಸ್ ಮಂಡ್ಯ